ದಿನಾಂಕ: 3-4-2019 ರಂದು ಪಿಡಬ್ಲ್ಯೂ-1ರನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯ್ತು.

ಮುಂದುವರೆದ ಪಾಟೀ ಸವಾಲು : ಶ್ರೀ ಡಿ ಎಲ್ ಆರ್ ವಕೀಲರಿಂದ:-

ಹಿಂದೆ ನನಗೂ ಮತ್ತು ಮೋಹನ್ ರಾವ್ ಅವರಿಗೂ ಅಗ್ರಿಮೆಂಟ್ ಆಗಿರುವುದು ನನ್ನ ಸೈಟ್ ನಂ 12 ಮತ್ತು ಮೋಹನ್ ರಾವ್ ಅವರ ಸೈಟ್ ನಂ 13ಕ್ಕೆ ಎಂದರೆ ಸರಿ. ಆ ಅಗ್ರಿಮೆಂಟ್ ನನ್ನ ಹತ್ತಿರ ಇದೆ ಹುಡುಕಬೇಕು ಇದ್ದರೆ ಹಾಜರುಮಾಡುತ್ತೇನೆ. ಆ ಅಗ್ರಿಮೆಂಟ್ ನಲ್ಲಿ ಮೋಹನ್ ರಾವ್ ಅವರು ಸೈಟಿನ ಅಳತೆಯನ್ನು 30 ಅಡಿ ಇಂಟು 70ಅಡಿ ಅಂತ ಹಾಕಿದ್ದರು. ನನ್ನ ಸೈಟಿನ ಅಳತೆ 28ಅಡಿ ಇಂಟು 70ಅಡಿ ಅಂತ ಹಾಕಿದ್ದೆ. ನಾನು ಮನೆ ಕಟ್ಟುವಾಗ ಲೈಸೆನ್ಸಗೆ ಅರ್ಜಿ ಸಲ್ಲಿಸಿದಾಗ ಮುನ್ಸಿಪಲ್ ಕಮೀಷನರ್ ಅವರು ಬಂದು ಪೂರ್ತಿ ಲೇಔಟ್ ಅಳತೆ ಮಾಡಿಲ್ಲ ಉತ್ತರ ಕಡೆಯಿಂದ ಸಿಡಿಎ ಜಾಗ, ಪಾರ್ಕ ಮತ್ತು ಕುಮಾರಸ್ವಾಮಿ ಅವರ ಸೈಟ್, ಚಂದ್ರಶೇಖರ್ ಅವರ ಸೈಟು ಮತ್ತು ಲಕ್ಷ್ಮಿ ಅವರ ಸೈಟು ಅಳತೆ ಮಾಡಿದರು. ಅದರ ಪಕ್ಕದಲ್ಲಿರುವ ಮೋಹನ್ ರಾವ್ ಅವರ ಸೈಟು ಮತ್ತು ನನ್ನ ಸೈಟು ಹಾಗೂ ಲಕ್ಷ್ಮಿದೇವಿ ಅವರ ಸೈಟು ಅಂದರೆ ಸೈಟ್ ನಂ 11 ರಿಂದ 16ನ್ನು ಅಳತೆ ಮಾಡಿದರು. ಅವರು ಅಳತೆ ಮಾಡಿದ್ದು ಸರಿ ಇದೆ ಅಂತ ಆ ಬಗ್ಗೆ ನಕ್ಷೆ ಅಥವಾ ವರದಿಯನ್ನು ಪಡೆದುಕೊಳ್ಳಲಿಲ್ಲ. ನಂತರ ಮುನ್ಸಿಪಾಲ್ಟಿಯಿಂದ ಸಿಡಿಎಗೆ ಅಪ್ರೂವಲ್‌ಗೆ ಹೋದಾಗ ಪುನಃ ಸಿಡಿಎ ಇಂಜಿನಿಯರ್ ಬಂದು ಸೈಟ್ ನಂ 11 ರಿಂದ 16 ಅಳತೆ ಮಾಡಿಕೊಂಡು ಹೋಗಿದ್ದಾರೆ. ಮುನ್ಸಿಪಲ್ ಇಂಜಿನಿಯರ್ ಆಗಲಿ ಸಿಡಿಎ ಇಂಜಿನಿಯರ್ ಆಗಲಿ ಸೈಟ್ ನಂ 11, 13 ರಿಂದ 16ರವರಿಗೆ ನೋಟಿಸು ಕೊಟ್ಟಿಲ್ಲ. ನಾನು ಸಿಡಿಎ ಇಂಜಿನಿಯರ್ ಮತ್ತು ಮುನ್ಸಿಪಲ್ ಇಂಜಿನಿಯರಿಂದ ಅಳತೆ ಮಾಡಿದ ಬಗ್ಗೆ ನಕ್ಷೆ ಅಥವಾ ವರದಿ ಪಡೆದುಕೊಳ್ಳಲಿಲ್ಲ ಅವರು ಕೊಡಲಿಲ್ಲ. ನಾನು ಕಟ್ಟಡ ಕಟ್ಟಿರುವುದು ಸೈಟ್ ನಂ 11ರ 3ಅಡಿ ಜಾಗ ಮತ್ತು ಸೈಟ್ ನಂ 12ರಲ್ಲಿ ಮಾತ್ರ ಇರುತ್ತದೆ. ನಾನು ಸೈಟ್ ನಂ 13ರಲ್ಲಿ ಗೊತ್ತಾಗಿ ಬಿಲ್ಡಿಂಗ್ ಕಟ್ಟಿಲ್ಲ. ನನಗೆ ಪರ್ಮಿಷನ್ ಕೊಡುವಾಗ ಸಿಡಿಎ ಇಂಜಿನಿಯರ್ ಮತ್ತು ಮುನ್ಸಿಪಲ್ ಇಂಜಿನಿಯರ್ ಆಗಲಿ ಸ್ಥಳಕ್ಕೆ ಬಂದಿಲ್ಲ ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ರೀತಿ ಬಂದು ಅಳತೆ ಮಾಡಿದ್ದಾರೆ ಎಂದು ತೋರಿಸಲು ದಾಖಲೆ ಇಲ್ಲ. ನನಗೆ ಕೊಟ್ಟಿರುವ ಲೈಸೆನ್ಸ ಅವರು ಸ್ಥಳಕ್ಕೆ ಬಂದು ಅಳತೆ ಮಾಡಿದ್ದಾರೆ ಎಂಬ ಬಗ್ಗೆ ದಾಖಲೆ ಇರುತ್ತದೆ.

ರಾಘವೇಂದ್ರ ಅವರು ಕುಮಾರಸ್ವಾಮಿ ಮೇಲೆ ಕೇಸು ಹಾಕಿರುವುದು ನನಗೆ ಗೊತ್ತಿದೆ. ಆ ಕೇಸಿನಲ್ಲಿ ಶಿವಕುಮಾರ್, ಸಿಡಿಎ ಇಂಜಿನಿಯರ್ ಬಂದು ಸೈಟ್ ನಂ 11 ರಿಂದ 16ನ್ನು ಅಳತೆ ಮಾಡಿದ್ದಾರೆ ಎಂದರೆ ಸರಿ ನನಗೆ ನೋಟಿಸು ಕೊಟ್ಟಿಲ್ಲ ಆದರೆ ಅಳತೆ ಮಾಡಿದ್ದಾರೆ. ನಾನು ಅಳತೆ ಮಾಡುವ ಸಮಯದಲ್ಲಿ ಹಾಜರಿದ್ದು ಮೂಲ ದಾಖಲೆಗಳನ್ನು ಅವರಿಗೆ ತೋರಿಸಿದ್ದೇನೆ

ಎಂದರೆ ಮಾರನೇ ದಿನ ಅವರ ಕಛೇರಿಗೆ ತೆಗೆದುಕೊಂಡು ಹೋಗಿ ತೋರಿಸಿದ್ದೇನೆ. ಆ ಕೇಸಿನಲ್ಲಿ ಶಿವಕುಮಾರ್ ಅವರು ಕೋರ್ಟಿಗೆ ರಿಪೋರ್ಟ ಕೊಟ್ಟಿದ್ದಾರೆ ಅದರ ನಕಲನ್ನು ಈ ವಾದಿ ತಂದು ಹಾಜರುಮಾಡಿದ್ದಾರೆ ಎಂದರೆ ಸರಿ. ಆ ರಿಪೋರ್ಟನ್ನು ನಾನು ಈ ಕೋರ್ಟಿಗೆ ಬಂದ ಮೇಲೆ ನೋಡಿದ್ದೇನೆ. ಆ ರಿಪೋರ್ಟ ತಪ್ಪು ಇದೆ. ಅದರಲ್ಲಿ ಪ್ರತಿ ಮನೆಯನ್ನು ನಿಖರವಾಗಿ ಅಳತೆ ಮಾಡಿಲ್ಲ. ನೀವು ತಪ್ಪು ಮಾಹಿತಿ ಕೊಟ್ಟಿದ್ದೀರಾ ಅಂತ ನಾನು ಸಿಡಿಎ ಇಂಜಿನಿಯರ್ ಮೇಲೆ ದೂರು ಕೊಟ್ಟಿಲ್ಲ ಆದರೆ ಹೋಗಿ ಕೇಳಿದ್ದೇವೆ. ಅವರು ತಪ್ಪು ಅಳತೆ ಮಾಡಿದ್ದಾರೆ ಸರಿಯಾಗಿ ಮಾಡಿಲ್ಲ ಅಂತ ನಾನು ಅವರ ಮೇಲಾಧಿಕಾರಿಗಳಿಗೆ ಲಿಖಿತವಾಗಿ ದೂರು ಕೊಟ್ಟಿಲ್ಲ. ಸೈಟ್ ನಂ 11 ರಿಂದ 16ನ್ನು ಪುನಃ ಅಳತೆ ಮಾಡಿಸಲು ನಾನು ರೆಡಿ ಇದ್ದೇನೆ.

ಕುಮಾರ್ ಅವರು ಲಕ್ಷ್ಮಿ ಮತ್ತು ಕಲಾವತಿ ಅವರ ಮೇಲೆ ಓ ಎಸ್ 278ಃ2009 ಹಾಕಿದ್ದರು ಎಂದರೆ ಹೌದು. ಲಕ್ಷ್ಮಿ ಮತ್ತು ಕಲಾವತಿ ಅವರು ತನ್ನ ಸೈಟ್ ನಂ 16ನ್ನು ಒತ್ತುವರಿ ಮಾಡಿದ್ದಾರೆ ಅಂತ ಕುಮಾರ್ ಆ ಕೇಸು ಹಾಕಿದ್ದರು ಎಂದರೆ ಸರಿ. ಆ ಕೇಸಿನಲ್ಲಿ ಸಿಡಿಎ ಇಂಜಿನಿಯರ್ ಬಿ ಎಸ್ ಮಂಜುನಾಥ ಅವರನ್ನು ಕೋರ್ಟ ಕಮಿಷನರ್ ಆಗಿ ನೇಮಕ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ಸೈಟ್ ನಂ 11 ರಿಂದ 16ನ್ನು ಅಳತೆ ಮಾಡಿ ಕೋರ್ಟಿಗೆ ರಿಪೋರ್ಟ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ ನನಗೆ ನೋಟಿಸು ಕೊಟ್ಟಿಲ್ಲ. ಕಮಿಷನರ್ ರಿಪೋರ್ಟ ಆಧಾರದ ಮೇಲೆ ಕುಮಾರ್ ಅವರು ಹಾಕಿದ ದಾವೆ ಡಿಕ್ರಿಯಾಯಿತು ಅಂದರೆ ನನಗೆ ಗೊತ್ತಿಲ್ಲ. ನಾನು ಸೈಟ್ ನಂ 13ನ್ನು ಒತ್ತುವರಿ ಮಾಡಿದ್ದೇನೆ ಎಂದರೆ ಸರಿಯಲ್ಲ ರಾಘವೇಂದ್ರ ಸೈಟ್ ಖರೀದಿ ಮಾಡುವ ಮೊದಲು ನಾನು ಮನೆ ಕಟ್ಟಿದ್ದೇನೆ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮನೆ ಓಪನ್ ಮಾಡುವಾಗ ಆಮಂತ್ರಣ ಪತ್ರಿಕೆಯನ್ನು ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರಿಗೆ ಮತ್ತು ಹೊರನಾಡಿನ ಭೀಮೇಶ್ವರ ಜೋಷಿ ಅವರಿಗೆ ಹಾಗೂ ಬೈರಪ್ಪ ಅಂಡ್ ಸನ್ಸ ಸಿಲ್ಕ ಸ್ಯಾರಿಸ್ ಅವರಿಗೆ ಕಳುಹಿಸಿದ್ದೆ ಅವರು ಒಳ್ಳೆಯದಾಗಲಿ ಅಂತ ಉತ್ತರ ಕಳುಹಿಸಿದ್ದಾರೆ. ಯಾರೇ ಆಮಂತ್ರಣ ಪತ್ರಿಕೆ ಕಳುಹಿಸಿದರೂ ಸಹ ಒಳ್ಳೆಯದಾಗಲೀ ಅಂತ ಆಶಿರ್ವಾದ ಪತ್ರ ಕಳುಹಿಸುವುದು ಅವರ ಪ್ರತೀತಿ ಎಂದರೆ ಇರಬಹುದು.

<u>ಮರು ವಿಚಾರಣೆ ಃ ಇಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

ಓಃಹೇಃಕೇಃಸಃಇಃವಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಸಿಜೆಎಂ. ಚಿಕ್ಕಮಗಳೂರು.